ಆ) ಈ ಸೇತುವೆ ನಿರ್ಮಾಣದಿಂದ ರಾಷ್ಟ್ರೀಯ ಹೆದ್ದಾರಿ ೧೭ ಮತ್ತು ಳನೇ ರಸ್ತೆಗಳನ್ನು ಕೂಡಿಸಂವ ಕೂಡು ರಸ್ತೆ ಮಾಡುವುದರಿಂದ ಕಾರವಾರದಿಂದ ಬೆಂಗಳೂರಿಗೆ ಬರಲು ೪೭ ಕಿಲೋಮೀಟರ್ ದೂರ ಕಡಿಮೆ ಆಗುವುದಿಲ್ಲವೆ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಆಚ್ಚುಕಟ್ಟು ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು).—

ಆ) ಮತ್ತು (ಆ) ಈ ಕೆಲಸವು ೧೯೮೬-೮೭ನೇ ಆರ್ಥಿಕ ವರ್ಷದಲ್ಲಿ ೭೦ ಲಕ್ಷ ರೂಪಾಯಿಗಳ ಅಂದಾಜು ಮತ್ತು ೧೦,೦೦೦ ರೂಪಾಯಿಗಳ ಸಾಂಕೇತಿಕ ಅನುದಾನದೊಂದಿಗೆ ಸೇರಿದೆ. ವಿವರವಾದ ಅಂದಾಜಿನಂತೆ ಇದಕ್ಕೆ ೧೧೦ ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಹಣದ ಲಭ್ಯತೆಯನ್ನಾಧರಿಸಿ, ಇದನ್ನು ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

ಸವದತ್ತಿ ನಗರದ ಶಾಲೆಯಲ್ಲಿ ಕೊಠಡಿಗಳನ್ನು ಕಟ್ಟುವ ಬಗ್ಗೆ

೪೭೫ (ಎ) ಶ್ರೀ ಚಂದ್ರಶೇಖರ ಮಾವಿನ (ಸವದತ್ತಿ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆ) ಸವದತ್ತಿನಗರದ ಕನ್ನಡ ಶಾಲೆಯಲ್ಲಿ ೩೮ ಕೊಠಡಿಗಳನ್ನು ಕಟ್ಟುವ ಬಗ್ಗೆ ಸರ್ಕಾರದವರ ನಿರ್ಧರಿಸಿರುವುದು ನಿಜವೇ ?

ಆ) ಹಾಗಿದ್ದಲ್ಲಿ ೮೭-೮೮ನೇ ಸಾಲಿನಲ್ಲಿ ಶಿಕ್ಷಣ ಇಲಾಖೆಗೆ ಒದಗಿಬರುವ ಹಣದಲ್ಲಿ ಈ ೩೮ ಶಾಲಾ ಕೊಠಡಿಗಳನ್ನು ಕಟ್ಟಿಸುವುದಕ್ಕೆ ಕಾಯ್ದಿರಿಸುವ ಹಣವೆಷ್ಟು ?

ಇ) ಕಟ್ಟಡ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಆ) ಇಲ್ಲ.

ಆ) ೮೭-೮೮ನೇ ಸಾಲಿನ ಆಯವ್ಯಯ ಗಾತ್ರ ತಿಳಿದಮೇಲೆ ನಿರ್ಧರಿಸಲಾಗುತ್ತದೆ.

ಇ) ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಹೆಚ್ಚಿನ ಹಣ ದೊರೆತರೆ ಪರೀಕ್ಷಿಸಲಾಗುವುದು.

ಮಹಾದಂಡೇಯಂ ಯೋಜನೆ ಬಗ್ಗೆ

೭೦೭. ಎಂ. ಎಲ್. ಮಂತ್ರಣ್ಣನವರ್ (ಗೋಕಾಕ್).— ಮಾನ್ಯ ಲೋಕೋಪಯೋಗಿಗೆ ಆಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆ) ಮಹಾದಂಡೇಯ ಯೋಜನೆಯನ್ನು ಕಾರ್ಯಗತ ಮಾಡುವುದು ಸರ್ಕಾರದವರ ಗಮನದಲ್ಲಿದೆಯೇ ?

ಆ) ಈ ಯೋಜನೆಯಿಂದ ಆಗುವ ನೀರಾವರಿ ಕ್ಷೇತ್ರವೆಷ್ಟು ಮತ್ತು ಈ ಯೋಜನೆಯ ಅಂದಾಜು ವೆಚ್ಚವೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಆ) ಹೌದು.

ಆ) ೩೨. ೩೭೫ ಹೆಕ್ಟೇರುಗಳು (೮೦,೦೦೦ ಎಕರೆಗಳು) ೮೫೫-೨೬೮ ದರದ ಮೇಲೆ ೭೫೨೫ ಲಕ್ಷ ರೂಪಾಯಿಗಳು.